ತೆಲುಗು ಕಥಾಲೋಕದಲ್ಲಿ ಮಾರ್ಮಿಕತೆ, ಮ್ಯಾಜಿಕ್‌ರಿಯಲಿಸಂ, ಮಿಸ್ಟಿಸಿಸಂ ಬೆರೆಸಿ ಕಥೆಯನ್ನು ಅಸಂಗತ ಕಲಾಕೃತಿಯಂತೆ ಚಿತ್ರಿಸಬಲ್ಲ ಕಥೆಗಾರ ವಿ. ಚಂದ್ರಶೇಖರ ರಾವ್. ಮೂರು ದಶಕಗಳ ತಮ್ಮ ಸಾಹಿತ್ಯಯಾನದಲ್ಲಿ ಸಮಾಜದ ಸಂಘರ್ಷಗಳನ್ನು, ಒತ್ತಡಗಳನ್ನು, ಸಂಕೀರ್ಣತೆಗಳನ್ನು ತಮ್ಮ ಕಥೆಗಳಲ್ಲಿ ಪ್ರಸ್ತುತಪಡಿಸಿದವರು. 'ಜೀವನಿ', 'ಲೆನಿನ್ ಪ್ಲೇಸ್', 'ಮಾಯಾಲಾಂತರು', 'ದ್ರೋಹವೃಕ್ಷಂ' ಕಥಾಸಂಕಲನಗಳು. 'ಐದು ಹಂಸಲು', 'ನಲ್ಲಮಿರಿಯಂ ಚೆಟ್ಟು', 'ಆಕು ಪಚ್ಚನಿ ದೇಶಂ' ಕಾದಂಬರಿಗಳು.

ತಂದುಕೊಳ್ಳುವುದು ಆಕೆಗೆ ಅದೊಂಥರ ತೃಪ್ತಿ.

ದೋಣಿ ಸರೋವರದಲ್ಲಿ ತುಂಬಾ ಮುಂದೆ ಹೋಗಿತ್ತು. 'ಸತಪದ' ಪ್ರದೇಶದಲ್ಲಿ ಬಹಳ ಹೊತ್ತು ದೋಣಿಯನ್ನು ನಿಲ್ಲಿಸಿದ ಗೈಡ್. ಆ ಪ್ರದೇಶ ಡಾಲ್ಫಿನ್‌ಗಳಿಗೆ ಪ್ರಸಿದ್ಧ. ಒಮ್ಮೆಲೇ ನೀರೊಳಗಿಂದ ಮೇಲಕ್ಕೆ ಹಾರುವ ಡಾಲ್ಫಿನ್‌ಗಳ ಕಡೆ ಪ್ರೀತಿಯಿಂದ ನೋಡಿದಳು ಆಕೆ. ದೋಣಿಯ ಅಂಚಿನ ಮೇಲೆ ಕುಳಿತು ತುಂಬಾ ಹೊತ್ತಿನಿಂದ 'ಸ್ಯಾಂಡ್‌ಪೈಪರ್' ಹಕ್ಕಿಯೊಂದು ಆಕೆಯನ್ನು ಹಿಂಬಾಲಿಸುತ್ತಿತ್ತು. ಅದನ್ನು ತೆಲುಗಿನಲ್ಲಿ ಏನೆನ್ನುತ್ತಾರೆಂದು ಗೈಡನ್ನು ಕೇಳಿದಳು. ದೋಣಿ ಬ್ರಹ್ಮಪುತ್ರ ಪ್ರದೇಶಕ್ಕೆ ಹೋಗುವಷ್ಟರಲ್ಲಿ ಹನಿಗಳು ಉದುರಲಾರಂಭಿಸಿದವು.

ಬ್ರಹ್ಮಪುತ್ರದಲ್ಲಿ ಆಕೆಗೆ ಮತ್ತೊಬ್ಬ ಟೂರಿಸ್ಟ್ ಪರಿಚಯವಾದ. ಅವನು ಅಗಲವಾದ ದೊಡ್ಡ ಕಪ್ಪು ಕನ್ನಡಕ ಧರಿಸಿದ್ದ. ಜೊತೆಯಲ್ಲಿ ಊರುಗೋಲು ಇತ್ತು. ಅವನು ಕುರುಡ. ಅವನೊಂದಿಗೆ ಹುಡುಗನೊಬ್ಬ ಸಹಾಯಕನಾಗಿದ್ದ. ಅವನು ಪ್ರತಿ ವಿಷಯವನ್ನು ವಿವರಿಸಿ ಹೇಳಬೇಕೆಂದು ಗೈಡ್‌ನನ್ನು ಗೋಳುಹುಯ್ದುಕೊಳ್ಳುತ್ತಿದ್ದ. ಸರೋವರದಲ್ಲಿ ಚಿಕ್ಕ ಸದ್ದಾದರೂ ಅದೇನೆಂದು ಕೇಳುತ್ತಿದ್ದ. 'ಕ್ವಾಕ್-ಕ್ವಾಕ್' ಎಂದು ಕೂಗುತ್ತ ಹಾರುತ್ತಿದ್ದ ನೀರಹಕ್ಕಿಗಳ ರೂಪವನ್ನು ವಿವರಿಸಬೇಕೆಂದು, ನೀರಿನ ಮೇಲೆ ತಪಸ್ಸು ಮಾಡುತ್ತಿರುವ ಋಷಿಗಳಂತೆ ನಿಂತ ಪೆಲಿಕನ್ ಹಕ್ಕಿಯ ರೆಕ್ಕೆಗಳ ಕುರಿತು ಹೇಳಬೇಕೆಂದು ಪೀಡಿಸುತ್ತಿದ್ದ. ಆಕೆ ಆಶ್ಚರ್ಯದಿಂದ ಅವನ ಕಡೆಗೆ ನೋಡುತ್ತಿದ್ದಳು. ಅವನ ಕೈಯಲ್ಲಿ ಪೋಲರಾಯಿಡ್ ಕ್ಯಾಮರಾ ಇತ್ತು. ಹಕ್ಕಿಗಳು ಯಾವ ಕಡೆ ಇವೆಯೋ ಎಂದು ಕೇಳಿ ಆ ಕಡೆ ಕ್ಯಾಮರಾ ತಿರುಗಿಸಿ ಫೋಟೊಗಳನ್ನು ತೆಗೆಯುತ್ತಿದ್ದ. ಫೋಟೊ ಹೊರಬರುತ್ತಿದ್ದಂತೆ, ಫೋಟೊವನ್ನು ಗೈಡ್‌ಗೆ ಕೊಟ್ಟು ಫೋಟೋದಲ್ಲಿನ ದೃಶ್ಯವನ್ನು ವಿವರಿಸಲು ಕೇಳುತ್ತಿದ್ದ. ಚಿಲ್ಕಾ ಸರೋವರದಲ್ಲಿ ನೋಡಬೇಕಾದ ಮತ್ತೊಂದು ಅದ್ಭುತ ಈ ಮನುಷ್ಯನೆಂದು ಭಾವಿಸಿದಳು.

ಸಂಜೆಯಾಯಿತು. ಸೂರ್ಯ ಪಶ್ಚಿಮದಲ್ಲಿ ಜಾರುವ ಸಮಯ. ಆತ ಸೂರ್ಯ ಯಾವ ಕಡೆ ಇದ್ದಾನೆಂದು ಗೈಡನ್ನು ಕೇಳಿದ. ಕ್ಯಾಮೆರಾವನ್ನು ಅತ್ತ ತಿರುಗಿಸಿ, ಆಕೆ ವಿಸ್ಮಯದಿಂದ ನೋಡುತ್ತಿದ್ದಂತೆ ತೆಗೆದ ಫೋಟೊವನ್ನು ಗೈಡ್ ಕೈಗೆ ಕೊಟ್ಟು ಸೂರ್ಯ ಹೇಗಿದ್ದಾನೆಂದು ನೋಡಿ ಹೇಳಬೇಕೆಂದ. ಫೋಟೊದಲ್ಲಿ ಸೂರ್ಯ ಇರಲಿಲ್ಲ. ಸರೋವರ ಮಾತ್ರವಿತ್ತು. ವಿವರಗಳನ್ನು ಕೇಳಿದ ನಂತರ ಅವನು 'ನಾಳೆ ಇಲ್ಲಿ ಮಳೆಯಾಗುತ್ತದೆ. ನಾಳೆ ಸೂರ್ಯ ಕಾಣಿಸುವುದಿಲ್ಲ' ಎಂದ. ಆಕೆ ಇನ್ನೂ ಆಶ್ಚರ್ಯದಿಂದ ಹಾಗೆಯೇ ನೋಡುತ್ತಿದ್ದಳು. ಆಕೆಯ ಇರುವಿಕೆಯನ್ನು ಗಮನಿಸಿ, 'ನನ್ನ ಹೆಸರು ಎಸ್.ಎಸ್. ಸತ್ಯಸುಂದರ್. ನಾನು ಭವಿಷ್ಯತ್ತನ್ನು ಅರಿತಿರುವವನು. ಹೇಳಬಲ್ಲವನು' ಎಂದ. ಐವತ್ತು ವರ್ಷದ ಆ ಅಂಧ ಮನುಷ್ಯ ಆಕೆಗೊಂದು ಆಕರ್ಷಣೆಯಾದ. ತನ್ನ ಬೇಸರ, ಖಿನ್ನತೆ, ದಿಗಿಲನ್ನು ಪಕ್ಕಕ್ಕಿಟ್ಟು ಅವನೊಂದಿಗೆ ಸಮಯ ಕಳೆಯೋದು ಅವನ ಜೊತೆ ಮಾತಾಡೋದು ಆಕೆಗೆ ತುಂಬಾ ಇಷ್ಟವಾಗಿ ಬದಲಾಯಿತು.

ಆಕೆಯನ್ನು ತನ್ನ ಕಾಟೇಜಿಗೆ ರಾತ್ರಿಯೂಟಕ್ಕೆ ಆಹ್ವಾನಿಸಿದ ಸತ್ಯಸುಂದರ್. ಅವನ ಕಾಟೇಜು ವಿಶೇಷವಾಗಿತ್ತು. ಹೆಚ್ಚು ಫರ್ನಿಚರ್ ಇರಲಿಲ್ಲ. ವಿಶಾಲವಾದ ಮಂಚ, ಒಂದು ಪುಟ್ಟ ಟೀಪಾಯ ಒಂದು ಕುರ್ಚಿ ಮಾತ್ರವೇ ಇದ್ದವು. ಟೀಪಾಯದ ಮೇಲೆ ಸುಂದರವಾದ ಪಿಂಗಾಣಿ ಪಾತ್ರೆಗಳು. ಕೋಣೆಯ ತುಂಬಾ ಅಡುಗೆಯ ಘಮಘಮ. ಅವನು ಹಳೆಯ ಸಿನಿಮಾದಲ್ಲಿನ ಮನುಷ್ಯನಂತೆ ನೈಟ್‌ಗೌನು ಹಾಕಿಕೊಂಡಿದ್ದ. ಬೆಳ್ಳಿಬಣ್ಣದ ಮಿರಮಿರನೆ ಮಿಂಚುವ ತಲೆಗೂದಲು, ಉದ್ದನೆಯ ಮಿಲಿಟರಿ ಮೀಸೆಗಳು. 'ನೀವು ನನ್ನ ವಿಶೇಷ ಅತಿಥಿ' ಎಂದು ಆಹ್ವಾನಿಸಿದ.